# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 481 |
| ಸದಸ್ಯರ ಹೆಸರು | : ಶ್ರೀ ರಿಜ್ವಾನ್ ಅರ್ಷದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : ಮಾನ್ಯ ಸಣ್ಣ ಕೈಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 12.12.2018. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಣ್ಣ ಕೈಗಾರಿಕೆ ಮೂಲಕ ಸ್ವಯಂ ಉದ್ಯೋಗ ಸೃಷ್ಟಿಸಿಕೊಳ್ಳಲು ಈಗ ನೀಡುತ್ತಿರುವ 99 ವರ್ಷಗಳ ಲೀಸ್ ಅವಧಿಯನ್ನು ಇಳಿಕೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಸರ್ಕಾರಿ ಆದೇಶ ಸಂಖ್ಯೆ ಸಿಐ 105 ಎಸ್‌ಪಿಐ 2017, ಬೆಂಗಳೂರು ದಿನಾಂಕ 11-07-2017ರಲ್ಲಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳಿಗೆ 2 ಎಕರೆವರೆಗಿನ ನಿವೇಶನಗಳನ್ನು 99 ವರ್ಷಗಳ ಲೀಸ್ ಅವಧಿಗೆ ಬದಲಾಗಿ 10 ವರ್ಷಗಳ ಲೀಸ್ ಅವಧಿಗೆ ಇಳಿಕೆ ಮಾಡಲಾಗಿದೆ. (ಅನುಬಂಧ-1 ರಲ್ಲಿ ಲಗತ್ತಿಸಿದೆ) |
| ಆ) | ಇದ್ದಲ್ಲಿ, ಯಾವ ರೀತಿ ಕ್ರಮಕೈಗೊಳ್ಳಲಾಗುವುದು; ಇಲ್ಲದಿದ್ದಲ್ಲಿ, ಇಳಿಕೆ ಮಾಡಲು ಕ್ರಮಕೈಗೊಳ್ಳುವುದೇ; | ಈಗಾಗಲೇ 99 ವರ್ಷಗಳ ಲೀಸ್ ಅವಧಿಗೆ ಬದಲಾಗಿ 10 ವರ್ಷಗಳ ಲೀಸ್ ಅವಧಿಗೆ ಇಳಿಕೆ ಮಾಡಲಾಗಿದೆ. |
| ಇ) | ಕಳೆದ 05 ವರ್ಷಗಳಲ್ಲಿ ಅನುಷ್ಠಾನಕ್ಕೆ ತಂದಿರುವ ಕೈಗಾರಿಕೆ ಅಭಿವೃದ್ಧಿ ಯೋಜನೆಗಳಾವುವು; (ವಿವರ ನೀಡುವುದು) | ಕಳೆದ 5 ವರ್ಷಗಳಲ್ಲಿ ಅನುಷ್ಠಾನಕ್ಕೆ ತಂದಿರುವ ಕೈಗಾರಿಕೆ ಅಭಿವೃದ್ಧಿ ಯೋಜನೆಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ. |
| ಈ) | ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಸ್ಥಾಪನೆಗಾಗಿ ಡಿಪಿಆರ್ ತಯಾರಿಸಲಾಗಿದೆಯೇ; (ವಿವರ ನೀಡುವುದು) | ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಸ್ಥಾಪಿಸಲು ಸರ್ಕಾರದಿಂದ ಯಾವುದೇ ಡಿಪಿಆರ್ ತಯಾರಿಸುವುದಿಲ್ಲ. ಆದರೆ, ಟೆಕ್ಸಾಕ್ ನಂಥಹ ಸರ್ಕಾರಿ ಸಂಸ್ಥೆಗಳಿಂದ ಉದ್ಯಮಶೀಲರು ಡಿಪಿಆರ್ ಪಡೆಯಬಹುದಾಗಿರುತ್ತದೆ. |

**ಸಿಐ 124 ಸಿಎಸ್‌ಸಿ 2018**

[ಎಸ್.ಆರ್. ಶ್ರೀನಿವಾಸ್ (ವಾಸು)]
ಸಣ್ಣ ಕೈಗಾರಿಕೆ ಸಚಿವರು